**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,
ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 26/2023** **ಅ.ಸಾ. 2**

**ಚಾ.ಸಾ. 2**

| | | |
|---|---|---|
| ಸಾಕ್ಷಿದಾರರ ಹೆಸರು | - | ಶೀಮತಿ ಪ್ರೀತಿ |
| ಗಂಡನ ಹೆಸರು | - | ನಾಗರಾಜ ಪ್ರಭು |
| ವಯಸ್ಸು | - | 39 ವರ್ಷ |
| ಉದ್ಯೋಗ | - | ಖಾಸಗಿ ಉದ್ಯೋಗಿ |
| ವಿಳಾಸ | - | ಕೋಟ , ಬ್ರಹ್ಮಾವರ ತಾಲೂಕು. |

ದಿನಾಂಕಃ 24-04-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಮೃತ ಮಾಲತಿ ಕಾಮತ್ ನನ್ನ ತಾಯಿ. ಚಾಸಾ 1 ಮತ್ತು ಚಾಸಾ 3 ನನ್ನ ಸಹೋದರಿಯರು. ಚಾಸಾ 4 ನನ್ನ ಗಂಡ. ಈಗ ವಿಡಿಯೋ ಕಾನ್ಫರೆನ್ಸ್ ಮೂಲಕ ನನಗೆ ತೋರಿಸಿದ ವ್ಯಕ್ತಿಯ ಪರಿಚಯ ಇರುತ್ತದೆ. ಆತನು ನಮ್ಮ ತಾಯಿಯ ಮನೆ ನಿರ್ಮಾಣ ಕೆಲಸಕ್ಕೆ ಮೂಲ ಪ್ರಕರಣದ ಒಂದನೇ ಆರೋಪಿ ಜೊತೆ ಬರುತ್ತಿದ್ದ. ನನ್ನ ತಾಯಿ ಮಾಲತಿ ಕಾಮತ್ ವಿಷ್ಣುಮೂರ್ತಿ ನಗರದ 4 ನೇ ಕ್ರಾಸ್ ನಲ್ಲಿರುವ ಮನೆಯಲ್ಲಿ ಒಬ್ಬಳೇ ವಾಸ ಮಾಡುತ್ತಿದ್ದರು. ಚಾಸಾ 1 ಕಾಸರಗೋಡಿನಲ್ಲಿ ಚಾಸಾ 3 ವಿರಾಜಪೇಟೆಯಲ್ಲಿ ಹಾಗೂ ನಾನು ಕೋಟದಲ್ಲಿ ವಾಸ ಮಾಡುತ್ತಿದ್ದೆವು. ನಾವು ತಾಯಿಯ ಮನೆಗೆ ಬಂದು ಹೋಗುತ್ತಿದ್ದೆವು. ತಾಯಿ ಮನೆಯಲ್ಲಿ 2020 ರ ಜನವರಿಯಲ್ಲಿ ತಾಯಿ ವಾಸ ಮಾಡುತ್ತಿದ್ದ ಮನೆಯನ್ನು ಹೊಸದಾಗಿ ನಿರ್ಮಿಸಲು ಪ್ರಾರಂಭ ಮಾಡಿರುತ್ತೇವೆ. ಸದ್ರಿ ಮನೆಯನ್ನು ಅರ್ಧ ಕೆಡವಿ ಹೊಸ ಮನೆ ನಿರ್ಮಾಣಕ್ಕೆ ಪ್ರಾರಂಭಿಸಿದ್ದೆವು. ಆ ಮನೆಯ ಕಾಮಗಾರಿಯನ್ನು ಚಾಸಾ 8 ಇವರಿಗೆ ಕಾಂಟ್ರ್ಯಾಕ್ಟ್ ಕೊಟ್ಟಿದ್ದು ನಾವು ಬಂದು ಹೋಗುತ್ತಿದ್ದೆವು. ನಮ್ಮಲ್ಲಿರುವ ಬಂಗಾರವನ್ನು ಒತ್ತೆ ಇಟ್ಟು ಸಾಲ ಪಡೆಯುವ ಸಲುವಾಗಿ ನಮ್ಮ ಚಿನ್ನವನ್ನು ತಾಯಿಯ

ಮನೆಯಲ್ಲಿ ಇಟ್ಟಿದ್ದೆವು. ರೂ. 50,000/- ಹಣ ಸಹ ತಾಯಿಯ ಮನೆಯಲ್ಲಿ ಇಟ್ಟಿದ್ದೆವು. ನಮ್ಮ ತಾಯಿಯು ಒಂದು ಬಂಗಾರದ ಸರ, ಕಿವಿಯ ಓಲೆ ಮತ್ತು ಮೂಗುತ್ತಿ ಧರಿಸುತ್ತಿದ್ದರು.

2. ದಿನಾಂಕ 13-02-2020 ರಂದು ಬೆಳಿಗ್ಗೆ ಸುಮಾರು 7.30 ಗಂಟೆ ಸಮಯದಲ್ಲಿ ಚಾಸಾ 8 ಮಾಧವ ನನ್ನ ಗಂಡನಿಗೆ ದೂರವಾಣಿ ಕರೆ ಮಾಡಿ ನಮ್ಮ ತಾಯಿ ಮಾತನಾಡುತ್ತಿಲ್ಲ. ಮೂಗಿನ ಮೇಲೆ ತಲೆದಿಂಬು ಇಟ್ಟಿದ್ದಾರೆ ಕೂಡಲೇ ಬನ್ನಿ ಎಂದು ತಿಳಿಸಿದ್ದು ನಾನು ಮತ್ತು ನನ್ನ ಗಂಡ ವಾಹನದಲ್ಲಿ ತಾಯಿ ಮನೆಗೆ ಬಂದೆವು. ನಮ್ಮ ತಾಯಿಯನ್ನು ನೋಡಲಾಗಿ ಆಕೆ ಮೃತಪಟ್ಟಿದ್ದು ಕಿವಿ ಹರಿದು ಹೋಗಿದ್ದು,ಕುತ್ತಿಗೆ ಹತ್ತಿರ ಗಾಯ ಆಗಿದ್ದು ಆಕೆಯು ಧರಿಸುತ್ತಿದ್ದ ಚಿನ್ನದ ಸರ ಬೆಂಡೋಲೆ ಕಾಣೆಯಾಗಿತ್ತು. ಮನೆಯ ಕಪಾಟನ್ನು ಹುಡುಕಾಡಿದಾಗ ಬಟ್ಟೆಗಳು ಚೆಲ್ಲಾಪಿಲ್ಲಿಯಾಗಿದ್ದು ನಾವು ಮನೆಯಲ್ಲಿಟ್ಟಿದ್ದ ನಮ್ಮ ಬಂಗಾರ ಹಾಗೂ ರೂ. 50,000/- ಕಾಣೆಯಾಗಿತ್ತು. ನಮ್ಮ ತಾಯಿಯನ್ನು ಕೊಲೆಮಾಡಿ ಯಾರೋ ಚಿನ್ನಾಭರಣ ಮತ್ತು ಹಣವನ್ನು ದೋಚಿದ್ದಾರೆ ಎಂದು ಗೊತ್ತಾಯಿತು.

3. ನಂತರ ಈ ಮಾಹಿತಿಯನ್ನು ಪೋಲಿಸರಿಗೆ ನೀಡಿದ್ದು ಪೋಲೀಸರು ನಮ್ಮ ತಾಯಿ ಮನೆಗೆ ಬಂದು ಶವವನ್ನು ಪರಿಶೀಲಿಸಿರುತ್ತಾರೆ. ಆಗ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

4. ನಂತರ ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದು ಆ ದಿನ ವಿಡಿಯೋ ಕಾನ್ಫರೆನ್ಸ್ ಮೂಲಕ ನೋಡಿದ ಆರೋಪಿ ಹಾಗೂ ಮೂಲ ಪ್ರಕರಣದಲ್ಲಿ 1 ನೇ ಆರೋಪಿಯನ್ನು ನೋಡಿರುತ್ತೇನೆ. ಈ ಇಬ್ಬರು ಆರೋಪಿತರು ನನ್ನ ತಾಯಿಯನ್ನು ಕೊಲೆ ಮಾಡಿ ಹಣ ಚಿನ್ನ ಆಭರಣ ದೋಚಿರುತ್ತಾರೆ ಎಂದು ಗೊತ್ತಾಯಿತು. ಆರೋಪಿತರು  ನಮ್ಮ ತಾಯಿಯಿಂದ ಸುಲಿಗೆ ಮಾಡಿಕೊಂಡು ಹೋದ ಬಂಗಾರದ ಆಭರಣ ಹಾಗೂ ನಗದಿನ ಪೈಕಿ ರೂ.8,000/- ನಗದನ್ನು ಪೋಲೀಸರು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಈಗ ನೋಡುತ್ತಿರುವ ಮೂಲ ಎಸ್.ಸಿ.1/2021 ರಲ್ಲಿ ನಿಪಿ.10 ಎಂದು ಗುರುತಿಸಲಾದ ಛಾಯಾ ಚಿತ್ರದಲ್ಲಿ ಕಂಡುಬರುವ ಬಂಗಾರದ ಆಭರಣಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದ್ರಿ ಬಂಗಾರದ ಆಭರಣಗಳು ನನಗೆ ಮತ್ತು ನನ್ನ ಅಕ್ಕಂದಿರಿಗೆ ಸೇರಿದ ಬಂಗಾರದ ಆಭರಣಗಳಾಗಿದ್ದು ಅವುಗಳನ್ನು ಪೋಲಿಸರು ಆರೋಪಿತರಿಂದ ಅಮಾನತ್ತುಪಡಿಸಿ ಕೊಂಡಿರುತ್ತಾರೆ. ನಗದು ಹಣ ಮತ್ತು ಚಿನ್ನಾಭರಣಗಳನ್ನು ನಮ್ಮ ವಶಕ್ಕೆ ಪಡೆದುಕೊಂಡಿದ್ದೇವೆ. ಈಗ ತೋರಿಸಿದ  ನಿಪಿ-8 ಮೂಲ ಎಸ್.ಸಿ.1/2021 ರ ಛಾಯಾ ಚಿತ್ರದಲ್ಲಿ ಕಂಡುಬರುವ ನಗದು ಹಣ ಆರೋಪಿತರಿಂದ ವಶಪಡಿಸಿಕೊಂಡ

ಹಣವಾಗಿರುತ್ತದೆ. ಸದ್ರಿ ಛಾಯಾ ಚಿತ್ರವನ್ನು ಸಹಾ ಈ ಪ್ರಕರಣದಲ್ಲಿ ನಿಪಿ-8 ಮತ್ತು ನಿಪಿ-10 ಎಂದು ಗುರುತಿಸಲಾಗಿದೆ. ಸದ್ರಿ ಹಣವನ್ನು ಸಹಾ ನಾನು ನ್ಯಾಯಾಲಯದಿಂದ ನಮ್ಮ ಸುಪರ್ದಿಗೆ ತೆಗೆದುಕೊಂಡಿರುತ್ತೇನೆ.

**<u>ಆರೋಪಿ ಪರ ಪಾಟೀ ಸವಾಲುಃ ಶ್ರೀ ಆರ್.ಪಿ. ವಕೀಲರಿಂದಃ</u>**

1. ನನಗೆ ಮದುವೆಯಾಗಿ 14 ವರ್ಷ ಆಗಿದೆ. ನನ್ನ ಗಂಡ ನೆಲಗಡಲೆ ವ್ಯಾಪಾರ ಮಾಡುತ್ತಾರೆ. ನಾನು 10 ನೇ ತರಗತಿವರೆಗೆ ಓದಿದ್ದೇನೆ. ನನ್ನ ಗಂಡನ ಮನೆಯಿಂದ ತಾಯಿಯ ಮನೆಗೆ 25 ಕಿ.ಮೀ. ದೂರ ಇದೆ. ಗಂಡನ ಮನೆಯಲ್ಲಿ ನಮಗೆ ಪ್ರತ್ಯೇಕ ಮನೆ ಇದೆ. ವರ್ಷಕ್ಕೆ ಒಂದೆರಡು ಬಾರಿ ತಾಯಿಯ ಮನೆಗೆ ಹೋಗಿ ಬರುತ್ತೇವೆ. ಘಟನೆಗಿಂತ ಮುಂಚೆ ಸುಮಾರು 8 ತಿಂಗಳ ಹಿಂದೆ ತಾಯಿ ಮನೆಗೆ ಒಮ್ಮೆ ಹೋಗಿ ಬಂದಿದ್ದೆ. ನನ್ನ ಗಂಡನ ಮನೆಯಲ್ಲಿ ಬೀರುಗಳು ಇವೆ. ತಾಯಿಯ ಮನೆಯನ್ನು ಹೊಸದಾಗಿ ನಿರ್ಮಾಣ ಮಾಡಲು ಮೇಲ್ಛಾವಣಿ ಮತ್ತು ಗೋಡೆಗಳನ್ನು ಕೆಡವಿದ್ದರು. ಆ ಮನೆಯಲ್ಲಿಯೇ ಅಮ್ಮ ವಾಸವಾಗಿದ್ದರು. ಆಸುಪಾಸಿನಲ್ಲಿ ಸುಮಾರು 50 ವಾಸದ ಮನೆಗಳು ಇವೆ. ತಾಯಿಯ ಮನೆಗೆ 3 ಸೆಂಟ್ಸ್ ವಿಸ್ತೀರ್ಣದ ಜಾಗ ಇತ್ತು. ಅಕ್ಕಪಕ್ಕದಲ್ಲಿ ಸಾಕಷ್ಟು ಮನೆಗಳು ಇವೆ. ಸಂಬಂಧಿಕರ ಮನೆ ಇಲ್ಲ. ಮನೆ ನಿರ್ಮಾಣಕ್ಕೆ ನನ್ನ ಗಂಡ ಮಾತುಕತೆ ನಡೆಸಿದ್ದರು. ಯಾರೊಂದಿಗೆ ಮಾತುಕತೆ ನಡೆಸಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ಮನೆ ಕೆಲಸಕ್ಕೆ ಯಾರೆಲ್ಲಾ ಬರುತ್ತಿದ್ದಾರೆ ಎಂದು ನನಗೆ ಮಾಹಿತಿ ಇರಲಿಲ್ಲ.

2. ನಾವು ತಾಯಿ ಮನೆಗೆ ಹೋದಾಗ ಸುಮಾರು 50 ಜನ ಸೇರಿದ್ದರು. ಸುಮಾರು 8 ರಿಂದ 10 ಜನ ಪೋಲೀಸರು ಕೂಡ ಸೇರಿದ್ದರು. ನನ್ನ ಸಹೋದರಿಯರು ನಂತರ ಬಂದಿದ್ದಾರೆ. ಚಾಸಾ 3 ಬರುವಾಗ ಸಂಜೆಯಾಗಿತ್ತು. ನಾನು ಹೋದ ಅರ್ಧ ಗಂಟೆಯಲ್ಲಿ ಪೋಲೀಸರು ಶವವನ್ನು ಸರಿಸಿ ಇಟ್ಟಿರುತ್ತಾರೆ.

3. ನಾವು ಚಿನ್ನದ ಆಭರಣವನ್ನು ಅಂಗಡಿಯಲ್ಲಿ ಖರೀದಿ ಮಾಡುವಾಗ ರಶೀದಿ ಕೊಡುತ್ತಾರೆ. ಆ ರಶೀದಿಯನ್ನು ಪೋಲೀಸರಿಗೆ ಕೊಟ್ಟಿದ್ದೇವೆ. ಘಟನೆ ನಡೆದ ದಿನ ನಾನು ಠಾಣೆಗೆ ಹೋಗಿಲ್ಲ. ಆ ದಿನ ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿಲ್ಲ. ನನ್ನ ಬಳಿ ಮೊಬೈಲ್ ಫೋನ್ ಇದೆ. ಘಟನೆಯ ಹಿಂದಿನ ದಿನ ತಾಯಿಗೆ ಫೋನ್ ಮಾಡಿದ್ದೆ. ಚಾಸಾ 1 ರಿಂದ 5 ಒಟ್ಟಿಗೆ ಠಾಣೆಗೆ ಹೋಗಿರುತ್ತೇವೆ. ಘಟನೆಯ ಮಾರನೆಯ ದಿನ ದಿನಪತ್ರಿಕೆಗಳಲ್ಲಿ ಘಟನೆಯ ಕುರಿತಂತೆ ಸುದ್ದಿ ಬರೆದಿದ್ದರು. ಯಾರು ಕೃತ್ಯ ನಡೆಸಿದ್ದಾರೆ ಎಂದು ದಿನಪತ್ರಿಕೆಯಲ್ಲಿ ಬಂದಿತ್ತು. ಘಟನೆಯ

ಮಾರನೆಯ ದಿನ ನಾವು ಪೋಲೀಸರನ್ನು ವಿಚಾರಿಸಿಲ್ಲ. ತಾಯಿಯ ಮನೆಯಲ್ಲಿ ಚಿನ್ನ ಅಥವಾ ಹಣ ಇಟ್ಟದ್ದು ಇಲ್ಲ ಎಂದರೆ ಸರಿಯಲ್ಲ. ಮೃತೆ ಧರಿಸುತ್ತಿದ್ದ ಚಿನ್ನದ ಕುರುಹುಗಳು ಗೊತ್ತಿಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲಿ ಆರೋಪಿಗಳನ್ನು ನೋಡಿದ್ದೂ ಇಲ್ಲ ಹಾಗೂ ಪೋಲೀಸರು ಅವರಿಂದ ಆಭರಣ ಮತ್ತು ಹಣವನ್ನು ವಶಪಡಿಸಿಕೊಂಡದ್ದು ಇಲ್ಲ ಎಂದರೆ ಸರಿಯಲ್ಲ. ಪೋಲಿಸರಿಗೆ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

4. ನನ್ನ ತಾಯಿ ಮನೆಯಿಂದ ನಾನು ವಾಸವಾಗಿರುವ ಮನೆಗೆ ಸುಮಾರು 40 ಕಿ.ಮೀ. ದೂರ ಇದೆ. ಪ್ರಥಮವಾಗಿ ನಾನು ಮತ್ತು ನನ್ನ ಗಂಡ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ಸ್ಥಳಕ್ಕೆ ಹೋದಾಗ ಬೆಳಿಗ್ಗೆ 8-30 ಗಂಟೆ ಆಗಿತ್ತು. ಅಲ್ಲಿ ಸಾಕಷ್ಟು ಜನ ಸೇರಿದ್ದರು, ಪೋಲಿಸರು ಸಹಾ ಇದ್ದರು. ಸ್ಥಳದಲ್ಲಿ ಪೋಲಿಸರು ನಮ್ಮನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿರುತ್ತಾರೆ. ಈ ಘಟನೆಗೆ ಸಂಬಂಧಪಟ್ಟಂತೆ ನಾನು ಪೋಲಿಸ್ ಠಾಣೆಗೆ ಹೋಗಿಲ್ಲ. ನಾನು ಠಾಣೆಗೆ ಹೋಗಿಲ್ಲ, ಮತ್ತು ಠಾಣೆಯಲ್ಲಿ ಆರೋಪಿಯನ್ನು ನೋಡಿಲ್ಲ. ಪ್ರಕರಣದ ಆರೋಪಿಯನ್ನು ನಾನು ಪ್ರಥಮವಾಗಿ ನ್ಯಾಯಾಲಯದಲ್ಲೇ ನೋಡಿರುತ್ತೇನೆ. ಆರೋಪಿಗೂ ಮತ್ತು ಈ ಪ್ರಕರಣಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳುವ ರೀತಿ ಯಾವುದೇ ಘಟನೆ ನನ್ನ ತಾಯಿ ಮನೆಯಲ್ಲಿ ನಡೆದಿಲ್ಲ ಎಂದರೆ ಸರಿಯಲ್ಲ. ಪೋಲಿಸರು ನೀಡಿದ ತಪ್ಪು ಮಾಹಿತಿ ಮೇರೆಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-8 ರಲ್ಲಿ ನನ್ನ ಇರುವಿಕೆ ಕಂಡುಬರುವುದಿಲ್ಲ. ನಿಪಿ-10 ರಲ್ಲಿ ಕಂಡುಬರುವ ಆಭರಣ ಮತ್ತು ನಗದು ಹಣಕ್ಕೆ ಮತ್ತು ಈ ಪ್ರಕರಣಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

5. ಬ್ಯಾಂಕಿನಲ್ಲಿ ನಮಗೆ ಸೇರಿದ ಗೋಲ್ಡ್ ಲಾಕರ್ ಇರುವುದಿಲ್ಲ. ಮನೆ ಕಟ್ಟಲು ಸಾಲ ಮಾಡುವ ಉದ್ದೇಶದಿಂದಾಗಿ ನನ್ನ ಚಿನ್ನಾಭರಣಗಳನ್ನು ತಾಯಿಯ ಮನೆಯಲ್ಲಿ ಇಟ್ಟಿರುತ್ತೇನೆ. ನಿಖರವಾಗಿ ಯಾವ ದಿನಾಂಕದಂದು ಆಭರಣಗಳನ್ನು ಇಟ್ಟಿದ್ದೇನೆ ಎಂದು ಹೇಳಲು ಆಗುವುದಿಲ್ಲ. ನನ್ನ ತಾಯಿಗೆ 60 ವರ್ಷ ಆಗಿತ್ತು. ಮೊದಲು ನನ್ನ ತಾಯಿ ಬ್ಯಾಂಕಿನಲ್ಲಿ ಯಾವತ್ತೂ ಸಾಲ ಪಡೆದುಕೊಂಡಿಲ್ಲ. ನನ್ನ ತಾಯಿ ಮನೆಯಲ್ಲಿ ನಾನು ಮತ್ತು ನನ್ನ ಸಹೋದರಿ ಯಾವುದೇ ಚಿನ್ನವನ್ನು ಇಟ್ಟಿಲ್ಲ ಎಂದರೆ ಸರಿಯಲ್ಲ. ತಾಯಿ ಮನೆಯಲ್ಲಿ ಯಾವುದೇ ಭದ್ರತೆ ಇಲ್ಲದೇ ಇರುವ ಕಾರಣ ಚಿನ್ನಾಭರಣಗಳನ್ನು ಇಡುವ ಪ್ರಸಂಗ ಬರುವುದಿಲ್ಲ ಎಂದರೆ ಸರಿರಿಯಲ್ಲ. ನಾನು ಹೇಳಿದ

ರೀತಿ ತಾಯಿ ಮನೆಯಲ್ಲಿ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ -** ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.